# ಎಲೆದುಂಬಿಯ ಊಟ

ಚಿತ್ರ ಬರಹ:
**ಗಣಪತಿ ಬಾಳೆಗದ್ದೆ**



ಮಳೆ ಸಣ್ಣಗೆ ಸುರಿಯುತ್ತಿತ್ತು. ದಾರಿಯಲ್ಲಿ ನಡೆಯುತ್ತಿದ್ದವನಿಗೆ ಪಕ್ಕದ ಗಿಡದ ಮೇಲೆ ಪುಟ್ಟ ಜೀವಿಯೊಂದು ಕುಳಿತಿರುವುದು ಕಾಣಿಸಿತು. ಹತ್ತಿರ ಹೋದರೆ ಎಲೆಗಳ ನಡುವೆ ಅದು ಮರೆಯಾಯಿತು. ಇಣುಕಿ ಹುಡುಕಲು ಪ್ರಯತ್ನಿಸಿದರೆ ಮೊದಲು ಕಾಣಿಸಲಿಲ್ಲ; ಕಂಡರೂ ನಿಲ್ಲದೆ ಹಾರಿ ಹೋಯಿತು.

ಅದು ಕೆಂಪಗಿತ್ತು. ಯಾರದೋ ಹಣೆಯಿಂದ ಜಾರಿ ಬಿದ್ದ ಸಿಂಧೂರಕ್ಕೆ ಜೀವ ಬಂದಂತಿತ್ತು! ನೆತ್ತರದ ಬಿಂದುವಿಗೆ ರೆಕ್ಕೆ ಮೂಡಿದಂತಿತ್ತು! ನೋಡಲು ಸಣ್ಣಗೆ ಮುದ್ದು ಮುದ್ದಾಗಿತ್ತು.

ಮರು ದಿನದಿಂದ ಕ್ಯಾಮರಾದೊಂದಿಗೆ ಅದರ ಹುಡುಕಾಟಕ್ಕೆ ಶುರುವಿಟ್ಟುಕೊಂಡೆ. ಮೊದಲ ದಿನ ಕಂಡ ಅಕ್ಕ ಪಕ್ಕದ ಪೊದೆ, ಪೊದರುಗಳನ್ನೆಲ್ಲ ಶೋಧಿಸಿದೆ. ಮೂರ್‍ನಾಲ್ಕು ದಿನಗಳ ಬಳಿಕ ಪ್ರಯತ್ನ ಫಲ ಕೊಟ್ಟಿತು. ಐದಾರು ಅಂತಹ ಜೀವಿಗಳು ಕಾಣಿಸಿಕೊಂಡವು!

ಅವು ಅಲ್ಲಿ ಒಂದು ಕಾಡು ಬಳ್ಳಿಯ ಎಲೆಗಳನ್ನು ಮೇಯುತ್ತಿದ್ದವು. ಚೂರು ಚೂರೇ ಕತ್ತರಿಸಿ ನುರಿನುರಿದು ನುಂಗುತ್ತಿದ್ದವು. ಹಾಗೆಂದು ಎಲ್ಲವೂ ಒಟ್ಟೊಟ್ಟಿಗೇನೂ ಇರಲಿಲ್ಲ. ಒಂದಿಷ್ಟು ಅಂತರದಲ್ಲಿದ್ದವು. ಎರಡು ಮಾತ್ರ ಒಟ್ಟಿಗೇ ಕುಳಿತು ಅದೇ ಬಳ್ಳಿಯ ಮೃದುವಾದ ಕಾಂಡ ಕತ್ತರಿಸಿ ಪೊಗದಸ್ತಾದ ಊಟ ಮೆಲ್ಲುತ್ತಿದ್ದವು.

ಅವುಗಳಿಗೆ ತೊಂದರೆ ಆಗದಂತೆ ನಿಧಾನವಾಗಿ ಒಂದಿಷ್ಟು ಫೋಟೋ ಕ್ಲಿಕ್ಕಿಸಿಕೊಂಡೆ. ನಂತರ ಅವುಗಳ ಕುಲ–ಗೋತ್ರ ಅರಸಿಕೊಂಡು ಹೊರಟೆ.

ಇವು ಎಲೆ ತಿನ್ನುವ ದುಂಬಿಗಳು. ಇಂಗ್ಲಿಷಿನಲ್ಲಿ ಸ್ಕಾರ್ಲೆಟ್ ಲಿಲ್ಲಿ, ಲಿಲ್ಲಿ ಬೀಟಲ್ ಎಂದೆಲ್ಲ ಕರೆಯುತ್ತಾರೆ. ಕನ್ನಡದಲ್ಲಿ ಕೆಂಪು ದುಂಬಿ ಎನ್ನುತ್ತಾರೆ. ಇವುಗಳಿಗೆ ಬಾಚಣಿಕೆಯಂತಹ ಕೋಡುಗಳಿರುವುದರಿಂದ ಬಾಚಣಿಕೆ ದುಂಬಿಗಳೆಂಬ ಹೆಸರೂ ಇದೆ.

ಮೊದಲ ಮಳೆ ಬೀಳುತ್ತಿದ್ದಂತೆಯೇ ಅವುಗಳಿಗೆ ಆಹಾರವಾಗಲಿರುವ ಈ ಕಾಡು ಬಳ್ಳಿಗಳು ಚಿಗುರಿಕೊಳ್ಳುತ್ತದೆ. ಚಿಗುರಿನ ಸುಳಿವು ಸಿಕ್ಕಿ ಭೇಟಿ ನೀಡುವ ಈ ಕೆಂಪು ದುಂಬಿಗಳು ಬಳ್ಳಿಯ ಎಲೆ, ಎಳೆಯ ಕಾಂಡಗಳನ್ನೆಲ್ಲ ತಿನ್ನತೊಡಗುತ್ತವೆ. ಅಲ್ಲಿಯೇ ಅವುಗಳ ಪ್ರೀತಿ, ಪ್ರೇಮ, ಪ್ರಣಯಗಳೂ ನಡೆಯುತ್ತವೆ. ಮುಂದೆ ಮಳೆ ಜೋರಾಗುತ್ತಿದ್ದಂತೆಯೇ ಈ ಪುಟ್ಟ ಜೀವಿಗಳು ಕಣ್ಮರೆಯಾಗುತ್ತವೆ. ಕಾಲದ ಅನಂತದಲ್ಲಿ ಕಳೆದು ಹೋಗುತ್ತವೆ. ಮತ್ತೆ ಮುಂದಿನ ಮುಂಗಾರಿನಲ್ಲಿ ಮಾತ್ರ ಕಾಣಿಸಿಕೊಳ್ಳುತ್ತವೆ.